# ಸುದ್ದಿಸಂಚಯ

• ರಾಮಕೃಷ್ಣ ಮಿಷನ್ನಿನ ಕೊಲ್ಕತಾದ ಇನ್‌ಸ್ಟಿಟ್ಯೂಟ್ ಆಫ್ ಕಲ್ಚರ್ ಕೇಂದ್ರದ ಪರಿಶ್ರಮ ಹಾಗೂ ಆರ್ಥಿಕ ಸಹಾಯದಿಂದ ಹತ್ತಿರದ ಗೋಲ್ ಪಾರ್ಕ್ ವೃತ್ತದಲ್ಲಿ ೨೦೦೫ರ ನವೆಂಬರ್ ೩ರಂದು ಸ್ವಾಮಿ ವಿವೇಕಾನಂದರ ಕಂಚಿನ ಮೂರ್ತಿಯನ್ನು ರಾಮಕೃಷ್ಣ ಮಹಾಸಂಘದ ಪರಮಾಧ್ಯಕ್ಷರಾದ ಪೂಜ್ಯ ಸ್ವಾಮಿ ಗಹನಾನಂದಜಿ ಮಹಾರಾಜ್ ಅವರು ಅನಾವರಣಗೊಳಿಸಿದರು. ಕೊಲ್ಕತಾದ ಪೌರಸಭಾಧ್ಯಕ್ಷ ಶ್ರೀ ಬಿಕಾಶ್ ರಂಜನ್ ಭಟ್ಟಾಚಾರ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಅನೇಕ ಹಿರಿಯ ಸಾಧುಗಳು ಉಪಸ್ಥಿತರಿದ್ದರು.

• ಗುಜರಾತಿನ ಕಚ್ ಜಿಲ್ಲೆಯ ಆದಿಪುರ ಮತ್ತು ಧನೇತಿ ಪ್ರದೇಶಗಳಲ್ಲಿ ರಾಜಕೋಟ್‌ನಲ್ಲಿರುವ ರಾಮಕೃಷ್ಣ ಆಶ್ರಮವು ಮಹಿಳೆಯರಿಗಾಗಿ ಹೊಲಿಗೆ ಮತ್ತು ಕಸೂತಿಯ ಉಚಿತ ತರಬೇತಿ ಕೇಂದ್ರಗಳನ್ನು ೨೦೦೫ರ ನವೆಂಬರ್ ೮ರಂದು ಪ್ರಾರಂಭಿಸಿದೆ.

• ಪಶ್ಚಿಮ ಬಂಗಾಳದ ಕಮಾರಪುಕುರ, ಗುಜರಾತಿನ ಲಿಂಬ್ಡಿ, ಚೆನ್ನೈ, ಗುವಾಹಟಿ ಹಾಗೂ ಲಕ್ನೌ ನಗರಗಳಲ್ಲಿರುವ ರಾಮಕೃಷ್ಣ ಮಿಷನ್ ಕೇಂದ್ರಗಳು ಕಣ್ಣಿನ ರೋಗಿಗಳ ಉಚಿತ ತಪಾಸಣೆ ಹಾಗೂ ಚಿಕಿತ್ಸೆಯನ್ನು ನಡೆಸುತ್ತಿವೆ. ೨೦೦೫ರ ನವೆಂಬರ್ ತಿಂಗಳಲ್ಲಿ ೧೧೩೯ ರೋಗಿಗಳ ತಪಾಸಣೆ ಆಗಿದ್ದು, ೧೪೪೨ ರೋಗಿಗಳಿಗೆ ಉಚಿತವಾಗಿ ಔಷಧೋಪಚಾರ ಹಾಗೂ ೧೦೯ ರೋಗಿಗಳಿಗೆ ಉಚಿತ ಕನ್ನಡಕವನ್ನು ನೀಡಲಾಗಿದೆ. ೨೯೨ ರೋಗಿಗಳಿಗೆ ಉಚಿತವಾಗಿ ಶಸ್ತ್ರಚಿಕಿತ್ಸೆಯನ್ನು ಮಾಡಲಾಗಿದೆ.

• ಜಮ್ಮು ಮತ್ತು ಕಾಶ್ಮೀರದಲ್ಲಿ ಭೂಕಂಪ ಪೀಡಿತ ಪ್ರದೇಶದಲ್ಲಿ ಪರಿಹಾರ ಕಾರ್ಯ ಮುಂದುವರೆಯುತ್ತಿದೆ. ನವೆಂಬರ್ ೨೦೦೫ರಲ್ಲಿ ೩೧೭ ಕುಟುಂಬಗಳಿಗೆ ೧೦೦೦ ಕಂಬಳಿಗಳು ೨೦೦೦ ಶಾಲುಗಳು ಹಾಗೂ ೧೦,೦೦೦ ತಿನಿಸಿನ ಪ್ಯಾಕೆಟ್‌ಗಳನ್ನು ನೀಡಲಾಯಿತು.

• ಪಶ್ಚಿಮ ಬಂಗಾಳದ ಚಂಡೀಪುರ, ಕಾಥಿ, ಇಚ್ಛಾಪುರ, ನರೇಂದ್ರಪುರ ಕೇಂದ್ರಗಳ ಮೂಲಕ ನೆರೆಹಾವಳಿ ಪೀಡಿತ ಪ್ರದೇಶಗಳಲ್ಲಿ ಪರಿಹಾರ ಕಾರ್ಯ ನಡೆಸಲಾಗುತ್ತಿದೆ. ಕಳೆದ ಒಂದು ತಿಂಗಳಲ್ಲಿ ೯೧೮೨ ಕುಟುಂಬಗಳಿಗೆ ಆಹಾರ ಪದಾರ್ಥಗಳು, ಮೊಂಬತ್ತಿ, ಬೆಂಕಿಪೊಟ್ಟಣ ಹಾಗೂ ಹ್ಯಾಲೋಜೆನ್ ಗುಳಿಗೆಗಳನ್ನು ನೀಡಲಾಯಿತು.

• ಕರೀಮ್‌ಗಂಜ್ ಕೇಂದ್ರವು ಅಗ್ನಿದುರಂತದಲ್ಲಿ ನಷ್ಟಕ್ಕೀಡಾಗಿದ್ದ ಐದು ಕುಟುಂಬಗಳಿಗೆ ದಿನನಿತ್ಯದ ಬಳಕೆಗೆ ಬೇಕಾಗುವ ಪಾತ್ರೆ, ಹಾಸಿಗೆ, ಕಂಬಳಿ, ಬಟ್ಟೆ ಆಹಾರ ಪದಾರ್ಥಗಳನ್ನು ಒದಗಿಸಿದೆ.

• ಸುನಾಮಿಯಿಂದ ನಷ್ಟಕ್ಕೊಳಗಾದ ಕನ್ಯಾಕುಮಾರಿ ಜಿಲ್ಲೆಯ ಕಳಿಂಗರಾಜಪುರ ಮತ್ತು ಕೂಟ್ಟುಮಂಗಳಮ್ ಗ್ರಾಮಗಳಲ್ಲಿ ೪೬ ಹೊಸಮನೆಗಳನ್ನು ಚೆನ್ನೈ ಮಠವು ಬೆಸ್ತರಿಗೆ ನೀಡಿದೆ.

## ಚಂದಾದಾರರೇ, ಲೇಖಕರೇ, ದಯವಿಟ್ಟು ಗಮನಿಸಿ!

- ವಿವೇಕಪ್ರಭ ಪತ್ರಿಕೆಯನ್ನು ಸಂಪರ್ಕಿಸಲು ಪತ್ರಿಕೆಗಾಗಿಯೇ ಪ್ರತ್ಯೇಕ ಇ-ಮೇಲ್ ಸೌಲಭ್ಯ ಈಗ ಲಭ್ಯವಿದೆ. ಇದರ ಇ-ಮೇಲ್ ವಿಳಾಸಗಳು ಹೀಗಿವೆ:

  **vivekaprabha@dataone.in ;**

  **kannada.vivekaprabha@gmail.com**

- ಚಂದಾದಾರರು ಪತ್ರಿಕೆ ತಲುಪದಿದ್ದಲ್ಲಿ ದೂರುಗಳನ್ನು, ವಿಳಾಸ ಬದಲಾವಣೆ ಅಥವಾ ಓದುಗರ ಪ್ರತಿಕ್ರಿಯೆ – ಮುಂತಾದವುಗಳನ್ನು ಮೇಲಿನ ಇ-ಮೇಲ್ ವಿಳಾಸಗಳಿಗೆ ಕಳುಹಿಬಹುದು.
- ಲೇಖಕರು ತಮ್ಮ ಲೇಖನಗಳನ್ನು ಬರಹ ಅಥವಾ ನುಡಿ ತಂತ್ರಾಂಶಗಳಲ್ಲಿ ಡಿ.ಟಿ.ಪಿ. ಮಾಡಿಸಿದ್ದರೆ, ನೇರವಾಗಿ ಇ-ಮೇಲ್ ಮೂಲಕ ಕಳುಹಿಸಬಹುದು. ಬೇರೆ ತಂತ್ರಾಂಶವಾಗಿದ್ದರೆ, ದಯವಿಟ್ಟು ಫಾಂಟ್‌ಗಳನ್ನೂ ಸೇರಿಸಿ ಕಳುಹಿಸಿ.
- ದಯವಿಟ್ಟು ಒಂದು ವಿಳಾಸಕ್ಕೆ ಕಳುಹಿಸಿದ ಇ-ಮೇಲ್‌ಗೆ ಪ್ರತಿಕ್ರಿಯೆ ಬರದಿದ್ದರೆ ಇನ್ನೊಂದು ವಿಳಾಸಕ್ಕೆ ಕಳುಹಿಸಿ. ಇದರಿಂದ ಇ-ಮೇಲ್ ನಮಗೆ ತಲುಪುವುದು ಖಚಿತವಾಗುತ್ತದೆ.